OS 103/2022

ಪಿ ಡಬ್ಲೂ 1

ದಿನಾಂಕ 05.12.2023 ರಂದು ಸಾಕ್ಷಿಗೆ ಪ್ರಮಾಣೀಕರಿಸಲಾಯಿತು.

<u>ಪಾಟಿ ಸವಾಲು **1** ಮತ್ತು **2** ನೇ ಪ್ರತಿವಾದಿಗಳ ಪರ ಶ್ರೀ ಜಿ ಎನ್ ಎಸ್ ವಕೀಲರಿಂದಃ-</u>

1. ದಾವಾದ ಬಗ್ಗೆ ನನಗೆ ಮಾಹಿತಿ ಇದೆ. ನನಗೆ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಮಾಹಿತಿ ತಿಳಿದಿದೆ. ನನ್ನ ಜಮೀನು ಸ. ನಂ. 137 ರಲ್ಲಿ ರಸ್ತೆ ಮಾಡಲಾಗಿದೆ. ಮದಗಹಾರನಹಳ್ಳಿಯಿಂದ ಜಮೀನಿಗೆ ಹೊಂದಿಕೊಂಡಂತೆ ಇರುವ ಗುಡ್ಡದವರೆಗೆ ರಸ್ತೆ ಮಾಡಲಾಗಿದೆ. ಊರಿಗೆ ಹೊಂದಿಕೊಂಡಂತೆ ನನ್ನ ಜಮೀನು ಇರುತ್ತದೆ ಅಂದಾಜು 100 ಅಡಿ ಅಂತರವಿರುತ್ತದೆ. ಪ್ರತಿವಾದಿಯರು ನನ್ನ ಜಮೀನಿನಲ್ಲಿ ರಸ್ತೆ ಮಾಡಲು ಪ್ರಯತ್ನಿಸಿದ್ದರು ಆದರೆ ನಾನು ನ್ಯಾಯಾಲಯಕ್ಕೆ ಬಂದ ನಂತರ ಅದನ್ನು ನಿಲ್ಲಿಸಿರುತ್ತಾರೆ. ನನ್ನ ಪಕ್ಕದ ಜಮೀನಿನಲ್ಲಿ ರಸ್ತೆ ಹೋಗಿರುವುದಿಲ್ಲ. ನನ್ನ ಜಮೀನಿನಲ್ಲಿ ಮಾತ್ರ ರಸ್ತೆ ಮಾಡಲು ಪ್ರಯತ್ನಿಸಿರುತ್ತಾರೆ.

2. ಗ್ರಾಮ ಪಂಚಾಯಿತಿಯವರು ನನ್ನ ಜಮೀನಿನಲ್ಲಿ ರಸ್ತೆ ಮಾಡಲು ಬಂದಿರುತ್ತಾರೆ. ನನ್ನ ಜಮೀನಿನಲ್ಲಿ ಜೆ ಸಿ ಬಿ ಯಿಂದ ಮಣ್ಣು ತೆಗೆದಿರುತ್ತಾರೆ ತದನಂತರ ನಾನು ಜಮೀನಿಗೆ ಬಂದಿದ್ದು ನಿಖರವಾಗಿ ಗ್ರಾಮ ಪಂಚಾಯಿತಿಯಿಂದ ಯಾವ ಅಧಿಕಾರಿ ಬಂದಿದ್ದರು ಎಂದು ಹೇಳಲಾಗುವುದಿಲ್ಲ. ದಾವಾ ಸ್ವತ್ತನ್ನು ಭೂ ಪರಿವರ್ತನೆ ಮಾಡಿಸಲಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸರ್ವೆ ನಂಬರ್ ಇರುತ್ತದೆ ಎಂದರೆ ಸರಿ. ಯಾವ ದಿನಾಂಕದಂದು ಪ್ರತಿವಾದಿಯರು ನನಗೆ ತೊಂದರೆ ಕೊಟ್ಟಿರುತ್ತಾರೆ ಎಂದು ಹೇಳಲಾಗುವುದಿಲ್ಲ. ವಾದಪತ್ರದಲ್ಲಿ ಸದರಿ ದಿನಾಂಕ ನಮೂದಿಸಿದ್ದೆನೋ ಇಲ್ಲವೋ ನೆನಪಿಲ್ಲ.

3. 3 ನೇ ಪ್ರತಿವಾದಿಯು ಈಗಾಗಲೇ ಇರುವ ರಸ್ತೆಯನ್ನು ಅಭಿವೃದ್ಧಿಪಡಿಸುತ್ತಿದ್ದು ಹೊಸದಾಗಿ ರಸ್ತೆ ನಿರ್ಮಾಣ ಮಾಡುತ್ತಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ದಾವಾ ಸ್ವತ್ತಿನಲ್ಲಿ ರಸ್ತೆ ಮಾಡುತ್ತಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರನ್ನು ಈ ದಾವೆಯಲ್ಲಿ ಅನಾವಶ್ಯಕ ಪಕ್ಷಗಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ತೊಂದರೆ

ಕೊಡುತ್ತಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಪಾಟಿ ಸವಾಲುಃ 3 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು ಪಾಟಿ ಸವಾಲನ್ನು ಮುಂದೂಡಲಾಯಿತು.

ಓ.ಹೇ.ಕೇ.ಸರಿಯಿದೆ.

(ತೆ.ನ್ಯಾಸಾ.ಹೇ.ಬೆ.ಮಾಡಲಾಯಿತು).

ಸಿ/ಸಿ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಶಿಕಾರಿಪುರ.